ಮಂಡ್ಯ ನಗರದ ಜಿಲ್ಲಾ ಮಟ್ಟದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣ ನಿರ್ಮಿಸಲು ರೂ. 31.45 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಮೂಲವಿನ್ಯಾಸದ ಪ್ರಕಾರ ಪೆವಿಲಿಯನ್ ಕಟ್ಟಡ, ಗ್ಯಾಲರಿ, ಆಟದ ಮೈದಾನ, ಸುತ್ತಲೂ ಚೈನ್‌ಲಿಂಕ್ ಫೆನ್ಸಿಂಗ್, ಜೋಡಿ ಬಾಸ್ಕೆಟ್‌ಬಾಲ್ ಅಂಕಣ ಕಾಮಗಾರಿಗಳನ್ನು ಮೂಲವಿನ್ಯಾಸದಂತೆ ಶೇ 100 ರಷ್ಟು ಪೂರ್ಣಗೊಂಡಿರುತ್ತವೆ.

ಅ) ಜಿಲ್ಲಾ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಿ ರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ಅನುವು ಮಾಡಿಕೊಡುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;

ಜಿಲ್ಲಾ ಕ್ರೀಡಾಂಗಣವು ರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ಅನುವು ಮಾಡುವ ವ್ಯವಸ್ಥೆ ಹೊಂದಿದೆ ಮತ್ತು ಹಾಗೂ ರಾಜ್ಯ ಒಲಂಪಿಕ್ ಕ್ರೀಡಾಕೂಟವನ್ನು ನಡೆಸಲಾಗಿದೆ.

ಇ) ಕ್ರೀಡಾಂಗಣದಲ್ಲಿ ವೀಕ್ಷಕರಿಗೆ ಮೇಲ್ಚಾವಣಿ ನಿರ್ಮಿಸಿಕೊಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಕ್ರೀಡಾಂಗಣದ ಪೆವಿಲಿಯನ್ ಕಟ್ಟಡದಲ್ಲಿ ವೀಕ್ಷಕರಿಗೆ ಮೇಲ್ಚಾವಣಿಯನ್ನು ಕಳೆದ ಸಾಲಿನಲ್ಲಿ ನಡೆದ ಒಲಂಪಿಕ್ ಕ್ರೀಡಾಕೂಟದ ಸಂದರ್ಭದಲ್ಲಿ ದುರಸ್ತಿಗೊಳಿಸಲಾಗಿದೆ.

ಉಳಿದಂತೆ ಕ್ರೀಡಾಂಗಣದ ಸುತ್ತ ವೀಕ್ಷಕರ ಗ್ಯಾಲರಿಯಲ್ಲಿ ಮೇಲ್ಚಾವಣಿ ನಿರ್ಮಿಸುವ ಬಗ್ಗೆ ಜಿಲ್ಲಾ ಕ್ರೀಡಾಂಗಣ ಸಮಿತಿಯಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹಾಗಿದ್ದಲ್ಲಿ, ಈ ಕ್ರೀಡಾಂಗಣದಲ್ಲಿ ಅವ್ಯವಸ್ಥೆಗಳು ಕ್ರೀಡೆಗೆ ಸಂಬಂಧಿಸಿರದ ಚಟುವಟಿಕೆಗಳು ಇಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :(382)192
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ.
ಉತ್ತರಿಸುವವರು : (ಶ್ರೀ.ಜಿ.ಕರುಣಾಕರ ರೆಡ್ಡಿ)
ಮಾನ್ಯ ಕಂದಾಯ ಸಚಿವರು.

ಅ) ರೈತರು ಜಮೀನು ಕಂದಾಯವನ್ನು ಕಟ್ಟದೇ ಇರುವ ಸಂದರ್ಭಗಳಲ್ಲಿ ಆ ಭೂಮಿಯನ್ನು ಬೀಳು ಭೂಮಿ ಎಂದು ಪರಿಗಣಿಸುತ್ತಿದ್ದನ್ನು ಸರ್ಕಾರ ರದ್ದು ಪಡಿಸಿರುವುದು ನಿಜವೇ;

ರೈತರು ಜಮೀನಿನ ಕಂದಾಯವನ್ನು ಕಟ್ಟದೇ ಇರುವ ಸಂದರ್ಭಗಳಲ್ಲಿ ಆ ಭೂಮಿಯನ್ನು ಬೀಳು ಭೂಮಿ ಎಂದು ಪರಿಗಣಿಸಲು ಅವಕಾಶವಿದ್ದ ಕರ್ನಾಟಕ

ಭೂ ಕಂದಾಯ ನಿಯಮಗಳು 1966ರ ನಿಯಮ 114ನ್ನು ನಿರಶನಗೊಳಿಸಲಾಗಿರುತ್ತದೆ.

ಆ) ಹಾಗಿದ್ದಲ್ಲಿ, ಆ ಕುರಿತು ಆದೇಶವನ್ನು ಯಾವಾಗ ಹೊರಡಿಸಲಾಯಿತು, ವಿವರ ನೀಡುವುದು;

ದಿ:17.02.1972ರಿಂದ ಜಾರಿಗೆ ಬರುವಂತೆ ಸದರಿ ನಿಯಮ 114ನ್ನು ಅಧಿಸೂಚನೆ ಸಂ:ಜಿಎಸ್ಆರ್ 65, ದಿ:22.01.1972ರಲ್ಲಿ ನಿರಶನಗೊಳಿಸಲಾಗಿದೆ.

ಇ) ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುತ್ತಿದ್ದ ಈ ಸೌಲಭ್ಯವನ್ನು ಹಿಂಪಡೆಯಲು ಕಾರಣಗಳೇನು;

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 163ರನ್ವಯ ಭೂ ಕಂದಾಯ ಬಾಕಿ ಎಂದು ಪರಿಗಣಿಸಿದ ಸಂದರ್ಭಗಳಲ್ಲಿ ಸದರಿ ಜಮೀನುಗಳನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ಇರುವುದರಿಂದ ಬೀಳು ಭೂಮಿ ಎಂದು ಪರಿಗಣಿಸುತ್ತಿದ್ದ ನಿಯಮ 114ನ್ನು ನಿರಶನಗೊಳಿಸಲಾಗಿದೆ.

ಈ) ರೈತರ ಅನುಕೂಲಕ್ಕಾಗಿ ಬೀಳು ಭೂಮಿ ಕುರಿತಾದ ಅಧಿಕಾರ ಮತ್ತು ಸೌಲಭ್ಯಗಳನ್ನು ಹಿಂದೆ ಇದ್ದಂತೆ ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (121)193
ಸದಸ್ಯರ ಹೆಸರು : ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)
ವಿಷಯ : ಲಂಬಾಣಿ ತಾಂಡ ಮತ್ತು ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು.
ಉತ್ತರಿಸುವ ಸಚಿವರು : (ಶ್ರೀ.ಜಿ.ಕರುಣಾಕರ ರೆಡ್ಡಿ) ಕಂದಾಯ ಸಚಿವರು

(ಅ) ರಾಜ್ಯದಲ್ಲಿರುವ ಎಲ್ಲಾ ಲಂಬಾಣಿ ತಾಂಡಗಳು ಮತ್ತು ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಹೌದು

(ಆ) ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)?

ರಾಜ್ಯದಲ್ಲಿ ಒಟ್ಟು 918 ತಾಂಡಗಳು ಇರುತ್ತವೆ. ಇವುಗಳಲ್ಲಿ 276ನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗಿದೆ.